# ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 72/2019

**ಸಾಕ್ಷಿಯನ್ನು ದಿಃ 12.09.2024 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಮಹೇಶ್ ಜೆ. ಈ | ಸಿಡಬ್ಲ್ಯೂ 14 | ಪಿಡಬ್ಲ್ಯೂ 9 |
| ತಂದೆಯ ಹೆಸರು | ಲೇಟ್ ಈರೇಗೌಡ | | |
| ವಯಸ್ಸು | 52 ವರ್ಷ | | |
| ಕೆಲಸ | ಮಂಡ್ಯ ಜಿಲ್ಲಾ ಪೊಲೀಸ್ ಕಚೇರಿ, | | |
| ವಾಸಸ್ಥಳ | ಮಂಡ್ಯ | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ದಿಃ 01.01.2018 ರಿಂದ ದಿಃ 12.08.2020 ರ ವರೆಗೆ ನಾನು ಹುಣಸೂರು ನಗರ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ01.06.2018 ರಂದು ಚಾಸಾ 13 ರವರಿಂದ ಈ ಪ್ರಕರಣ ಕಡತವನ್ನು ಸ್ವೀಕರಿಸಿ ತನಿಖೆಯನ್ನು ಮುಂದುವರೆಸಿರುತ್ತೇನೆ. ಅದೇ ದಿನ ವಿಶೇಷ ರಾತ್ರಿ ಗಸ್ತಿಗಾಗಿ ಚಾಸಾ 9 ರಿಂದ 11 ರವರನ್ನು ನೇಮಕಮಾಡಿರುತ್ತೇನೆ. ನಾನು ಕೂಡ ಆ ದಿನ ರಾತ್ರಿ ವಿಶೇಷ ಗಸ್ತು ಕರ್ತವ್ಯದಲ್ಲಿ ಇದ್ದು, ದಿನಾಂಕ 02.06.2018 ರ ಮುಂಜಾನೆ ಸುಮಾರು 3 ಗಂಟೆಗೆ ಹುಣಸೂರು ಹೊಸ ಅಂಚೆ ಕಚೇರಿ ರಸ್ತೆಯಲ್ಲಿ ಮೂರು ಜನ ಆಸಾಮಿಗಳು ಒಂದು ಸ್ಕೂಟರ್ ನಲ್ಲಿ ಹೋಗುತ್ತಿದ್ದು ನಮ್ಮ ಜೀಪ್ ನ್ನು ನೋಡಿ ಓಡಿಹೋಗಲು ಪ್ರಯತ್ನಿಸಿದರು. ತಕ್ಷಣ ನಾನು ಚಾಸಾ 12 ರವರಿಗೆ ಕರೆ ಮಾಡಿ ಪಿರಿಯಾಪಟ್ಟಣ ರಸ್ತೆಯ ಕಡೆಯಿಂದ ಬಂದು ಸೇತುವೆ ಹತ್ತಿರ ಸಾಲಿಯಾನ್ ರವರ ಮನೆಯ ಹತ್ತಿರ ಸದರಿ ಮೂರು ಆಸಾಮಿಗಳನ್ನು ಹಿಡಿದು ಠಾಣೆಗೆ ಕರೆ ತಂದು ಹೆಸರು ವಿಳಾಸ ಕೇಳಲಾಗಿ ಒಬ್ಬ ವ್ಯಕ್ತಿ ಕಿರಣ ಅಲಿಯಾಸ್ ಸುದಿ ಬಿನ್ ಚಿಕ್ಕರಾಜನಾಯಕ್, 19 ವರ್ಷ, ಕೂಲಿ ಕೆಲಸ, ಅಜಾದ್ ನಗರ, ಹುಣಸೂರು ತಾಲ್ಲೂಕು ಎಂದು ತಿಳಿಸಿದ. ಇನ್ನೊಬ್ಬ ತನ್ನ ಹೆಸರು ವಿನೋದ್ ಕುಮಾರ್ ಅಲಿಯಾಸ್ ಸೂರಿ ಅಲಿಯಾಸ್ ಆರ್ ಎಕ್ಸ್ ಸೂರಿ ಬಿನ್ ಚಿಟ್ಟೆ ಲೇಟ್ ಅಂದಾನಿ, 20 ವರ್ಷ,

ಗಾರೆ ಕೆಲಸ, ಮುತ್ತೂರು ಗ್ರಾಮ, ಪಿರಿಯಾಪಟ್ಟಣ ತಾಲ್ಲೂಕು ಎಂದು ತಿಳಿಸಿದ. ಇನ್ನೊಬ್ಬನ ಹೆಸರು ಸಂದೀಪ ಹೆಚ್ ಜೆ ಅಲಿಯಾಸ್ ವಿಲನ್ ಅಲಿಯಾಸ್ ಮಿನ್ನಿ ಬಿನ್ ಲೇಟ್ ಜಗದೀಶ, 18 ವರ್ಷ, ಮರಗೆಲಸ, ಸರಸ್ವತಿಪುರಂ, ಹುಣಸೂರು ಟೌನ್ ಎಂದು ತಿಳಿಸಿದ. ಸದರಿ ಮೂರು ವ್ಯಕ್ತಿಗಳನ್ನು ವಿಚಾರಣೆಗೆ ಒಳಪಡಿಸಿದಾಗ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕಳುವು ಮಾಡಿದ ಮಾಲುಗಳನ್ನು ಪಿರಿಯಾಪಟ್ಟಣದ ನತ್ತುಲಾಲ್, ಅರ್ಜುನ್ ಲಾಲ್ ಜ್ಯೂವೆಲರಿ ಮತ್ತು ಪಾನ್ ಬ್ರೋಕರ್ಸ್ ಅಂಗಡಿಯಲ್ಲಿ ಗಿರವಿ ಇಟ್ಟಿರುವುದಾಗಿ ತಿಳಿಸಿದ ಮೇರೆಗೆ ಅವರ ಸ್ವ ಇಚ್ಚಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಸದರಿ ಸ್ವ ಇಚ್ಚಾ ಹೇಳಿಕೆಗಳ ಯಥಾ ನಕಲುಗಳನ್ನು ಹಾಜರುಪಡಿಸಿದ್ದು ನಿಪಿ 5 ರಿಂದ 7 ಎಂದು ಗುರುತಿಸಲಾಯಿತು. ನಿಪಿ 5 ರ ಸ್ವ ಇಚ್ಚಾ ಹೇಳಿಕೆಯು 1 ನೇ ಆರೋಪಿಯಾದ್ದಾಗಿದ್ದು ನಿಪಿ 6 ರ ಸ್ವ ಇಚ್ಚಾ ಹೇಳಿಕೆಯು 3 ನೇ ಆರೋಪಿಯದ್ದಾಗಿದ್ದು ನಿಪಿ 7 ರ ಸ್ವ ಇಚ್ಚಾ ಹೇಳಿಕೆಯ 4 ನೇ ಆರೋಪಿಯದ್ದಾಗಿದ್ದು ಅವುಗಳಲ್ಲಿ ಅವರ ಮತ್ತು ನನ್ನ ಸಹಿಗಳಿವೆ. ಸದರಿ ದಾಖಲೆಗಳು ಯಥಾನಕಲುಗಳು ಆಗಿರುವುದರಿಂದ ಸಹಿಗಳನ್ನು ಗುರುತಿಸಿಕೊಂಡಿಲ್ಲ.

ಮೇಲೆ ಹೇಳಿದ ಮೂರು ಆಸಾಮಿಗಳನ್ನು ಠಾಣೆಯಲ್ಲಿ ವಿಚಾರಣೆಗೆ ಒಳಪಡಿಸಿ ಕೆಎ-32 ಇಪಿ-2953 ನಂಬರಿನ ಕಪ್ಪು ಬಣ್ಣದ ಹೋಂಡಾ ಆಕ್ಟಿವ್ ಸ್ಕೂಟರ್, ಸ್ಕೂಟರ್ ನ ಎರಡು ಕೀಗಳು, ಎರಡು ಕಬ್ಬಿಣದ ಸರಳುಗಳನ್ನು ಮತ್ತು 1 ನೇ ಆರೋಪಿಯ ಬಳಿಯಿಂದ ಬಿಳಿ ಮತ್ತು ಗೊಲ್ಡನ್ ಬಣ್ಣದ ಒಪ್ಪೋ ಕಂಪನಿಯ ಹಳೆಯ ಮೊಬೈಲ್ ಅದರಲ್ಲಿ 7975235043, 9742838818 ನಂಬರಿನ ಸಿಮ್ ಗಳು ಇರುತ್ತದೆ. 1 ನೇ ಆರೋಪಿಯ ಬಳಿಯಿಂದ ರೂ.500/- ರ ಮುಖಬೆಲೆಯ 4 ನೋಟುಗಳು ಇದ್ದ ಒಟ್ಟು ರೂ.2000/- ಗಳನ್ನು ಜಪ್ತು ಮಾಡಿಕೊಂಡಿರುತ್ತೇನೆ. 3 ನೇ ಆರೋಪಿಯ ಬಳಿಯಿಂದ ಒಂದು ಬಿಳಿ ಮತ್ತು ಗೋಲ್ಡನ್ ಕಲರ್ ನ ಒಪ್ಪೋ ಕಂಪನಿಯ ಹಳೆಯ ಮೊಬೈಲ್ ಅದರಲ್ಲಿ 9108395447 ಎಂಬ ನಂಬರಿನ ಸಿಮ್ ಇತ್ತು ಆತನ ಬಳಿಯಿಂದ ರೂ.1700/- ನಗದು ಹಣವನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ. 4 ನೇ ಆರೋಪಿಯ ಬಳಿಯಿಂದ ಒಂದು ಕಪ್ಪು ಬಣ್ಣದ ಸ್ಯಾಮ್‌ಸಂಗ್ ಡಿಯೋಸ್ ಕಂಪನಿಯ ಹಳೆಯ ಮೊಬೈಲ್ ಅದರಲ್ಲಿ 7349026359 ನಂಬರಿನ ಸಿಮ್ ಇದ್ದು ಆತನ ಬಳಿಯಿಂದ ಒಟ್ಟು ರೂ.1160/- ನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ. ಸದರಿ ಮಹಜರಿನ ಯಥಾ ನಕಲನ್ನು ಈಗಾಗಲೇ ನಿಪಿ 2 ಎಂದು ಗುರುತಿಸಿದ್ದು ಅದರಲ್ಲಿ ನನ್ನ ಸಹಿ ಇದೆ.

ತನಿಖೆಯನ್ನು ಮುಂದುವರೆಸಿ ಸದರಿ ಆರೋಪಿತರು ಒಡವೆಗಳನ್ನು ಗಿರವಿ ಇಟ್ಟ ಅಂಗಡಿಯನ್ನು ಕರೆದುಕೊಂಡು ಹೋದರೆ ತೋರಿಸುವುದಾಗಿ ಹೇಳಿದ ಮೇರೆಗೆ ಚಾಸಾ 6 ಮತ್ತು 7 ರವರನ್ನು ಪಂಚರಾಗಿ ಠಾಣೆಗೆ ಬರಮಾಡಿಕೊಂಡು ಅವರಿಗೆ ವಿಷಯವನ್ನು ತಿಳಿಸಿ ಪಂಚರಾಗಿ ಸಹಕರಿಸುವಂತೆ ಕೋರಿಕೊಂಡ

ಮೇರೆಗೆ ಅವರು ಒಪ್ಪಿಕೊಂಡ ಮೇರೆಗೆ ಅವರೊಂದಿಗೆ, 1 ಮತ್ತು 3 ನೇ ಆರೋಪಿತರೊಂದಿಗೆ ಇಲಾಖಾ ವಾಹನದಲ್ಲಿ ಚಿಲ್ಕುಂದ ಮಾರ್ಗವಾಗಿ ಪಿರಿಯಾಪಟ್ಟಣಕ್ಕೆ ತೆರಳಿದಾಗ ಒಂದು ಜ್ಯುವೆಲರಿ ಶಾಪ್ ಮುಂದೆ ಜೀಪ್ ನ್ನು ನಿಲ್ಲಿಸುವಂತೆ 1 ಮತ್ತು 3 ನೇ ಆರೋಪಿತರು ಹೇಳಿದ್ದು ಆ ಪ್ರಕಾರ ವಾಹನವನ್ನು ನಿಲ್ಲಿಸಲಾಗಿ ಸದರಿ ಅಂಗಡಿಯ ಮಾಲೀಕರಾದ ಚಾಸಾ 8 ರವರಿಗೆ ಈ ವಿಷಯವನ್ನು ತಿಳಿಸಿದ್ದು ಆ ಸಮಯದಲ್ಲಿ ಆರೋಪಿತರನ್ನು ಗುರುತಿಸಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತಹ ಕಳುವು ಮಾಡಿದ ಚಿನ್ನದ ಒಡವೆಗಳಾದ 5 ಗ್ರಾಂ 0.50 ಮಿಲಿ ಗ್ರಾಂ ತೂಕದ ಬಿಳಿ ಹರಳಿನ ಚಿನ್ನದ ಉಂಗುರ, 1 ಗ್ರಾಂ 608 ಮಿಲಿ ಗ್ರಾಂ ತೂಕದ ಚಿನ್ನದ ಉಂಗುರ, 2 ಗ್ರಾಂ 730 ಮಿಲಿ ಗ್ರಾಂ ತೂಕದ ಚಿನ್ನದ ಕಿವಿಯ ರಿಂಗ್ ಗಳು ಮತ್ತು 7 ಗ್ರಾಂ 900 ಮಿಲಿ ಗ್ರಾಂ ತೂಕದ ಚಿನ್ನದ ಚೈನನ್ನು ಹಾಜರುಪಡಿಸಿದ್ದು ಅವುಗಳನ್ನು ಚಾಸಾ 6 ಮತ್ತು 7 ರವರ ಸಮಕ್ಷಮ ನಿಪಿ 4 ನ ಮಹಜರಿನ ಮೂಲಕ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಸದರಿ ಮಹಜರ್ ನ್ನು ಮಧ್ಯಾಹ್ನ 1 ರಿಂದ 2 ಗಂಟೆಯವರೆಗೆ ಜರುಗಿಸಿರುತ್ತೇನೆ. ಸದರಿ ಮಹಜರಿಗೆ 1 ಮತ್ತು 3 ನೇ ಆರೋಪಿತರ ಸಹಿಗಳನ್ನು ಪಡೆದುಕೊಂಡಿರುತ್ತೇನೆ. ಸದರಿ ಮಹಜರಿಗೆ ಚಾಸಾ 8 ರವರ ಸಹಿಯನ್ನು ಸಹ ಪಡೆದಿರುತ್ತೇನೆ. ಸದರಿ ಮಹಜರಿನ ಯಥಾ ನಕಲನ್ನು ಈಗಾಗಲೇ ನಿಪಿ 4 ಎಂದು ಗುರುತಿಸಲಾಗಿದೆ ಅದರಲ್ಲಿ ನನ್ನ ಸಹಿಗಳಿವೆ. ವಶಪಡಿಸಿಕೊಂಡ ಮಾಲು ಮತ್ತು ಆರೋಪಿತರೊಂದಿಗೆ ಠಾಣೆಗೆ ವಾಪಸ್ಸಾಗಿ ಸ್ವತ್ತನ್ನು ಮಾಲು ಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯದ ಆದೇಶಕ್ಕಾಗಿ ನಿವೇದಿಸಿಕೊಂಡಿರುತ್ತೇನೆ. ಆರೋಪಿತರನ್ನು ಬೆಂ ಗಾವಲಿನಲ್ಲಿ ಠಾಣೆಯಲ್ಲಿ ಇರಿಸಿರುತ್ತೇನೆ.

ದಿನಾಂಕ 02.06.2018 ರಂದು ಚಾಸಾ 1 ರವರನ್ನು ಠಾಣೆಗೆ ಬರಮಾಡಿಕೊಂಡು ಪತ್ತೆಯಾದ ಮಾಲುಗಳನ್ನು ಅವರಿಗೆ ತೋರಿಸಿದ ಮೇರೆಗೆ ಅವರು ಅವುಗಳನ್ನು ಗುರುತಿಸಿದ್ದು ಆ ಬಗ್ಗೆ ಅವರ ಮುಂದುವರೆದ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದೇನೆ. ಆ ಸಮಯದಲ್ಲಿ ಚಾಸಾ 4 ಮತ್ತು 5 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದೇನೆ. ಆರೋಪಿತರು ತಮ್ಮ ಸ್ವ ಇಚ್ಛಾ ಹೇಳಿಕೆಯಲ್ಲಿ ಒಬ್ಬ ವ್ಯಕ್ತಿಯನ್ನು ಕೊಲೆ ಮಾಡಿದ ಬಗ್ಗೆ ಒಪ್ಪಿಕೊಂಡ ಮೇರೆಗೆ ಅದು ಘೋರ ಪ್ರಕರಣವಾಗಿದ್ದರಿಂದ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ 15 ರವರಿಗೆ ಹಸ್ತಾಂತರಿಸಿರುತ್ತೇನೆ . ನಾನು ವಶಕ್ಕೆ ಪಡೆದುಕೊಂಡಂತಹ ಮೂರು ಜನ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ 1, 3 ಮತ್ತು 4 ನೇ ಆರೋಪಿತರನ್ನು ನೋಡಿ ಗುರುತಿಸುತ್ತಾರೆ.

**ಪಾಟೀಸವಾಲು: 1 ನೇ ಆರೋಪಿ ಪರ ಶ್ರೀ ಎಂ ಇ ಎಂ ವಕೀಲರಿಂದ:**

ಈ ಪ್ರಕರಣದ ದೂರನ್ನು ಎರಡು ದಿನ ತಡವಾಗಿ ನೀಡಿದ್ದಾರೆ ಎಂದರೆ ಸರಿ. ದಿನಾಂಕ 01.06.2018 ರಂದು ನಾನು ವಿಶೇಷ ಗಸ್ತು ಕರ್ತವ್ಯಕ್ಕೆ ನೇಮಕಗೊಂಡ ಬಗ್ಗೆ ಠಾಣ ದಿನಚರಿ ಪುಸ್ತಕದಲ್ಲಿ ನಮೂದಿಸಲಾಗಿದೆ. ಆ ದಿನ ನಾವು ವಿಶೇಷ ಗಸ್ತು ಕರ್ತವ್ಯಕ್ಕೆ ಇಲಾಖಾ ಜೀಪಿನಲ್ಲಿ ಹೋಗಿದ್ದೆವು. ಆ ದಿನ ನಾನು ವಿಶೇಷ ಕರ್ತವ್ಯದಲ್ಲಿ ಇರಲಿಲ್ಲ ಮತ್ತು ಗಸ್ತು ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ 8 ರವರ ಹೇಳಿಕೆಯನ್ನು ತನಿಖೆಯ ಸಮಯದಲ್ಲಿ ಪಡೆದುಕೊಂಡಿಲ್ಲ ಆದರೆ ಅವರ ಸಹಿಯನ್ನು ಮಹಜರಿಗೆ ಪಡೆದುಕೊಂಡಿದ್ದೇನೆ. ಮಹಜರ್ ಕಾಲಕ್ಕೆ ಚಾಸಾ 6 ಮತ್ತು 7 ರವರಿಗೆ ನೋಟೀಸ್ ಕೊಟ್ಟಿಲ್ಲ. ಚಾಸಾ 6 ಮತ್ತು 7 ರವರು ನಮ್ಮ ಠಾಣೆಯ ಖಾಯಂ ಪಂಚರು ಎಂದರೆ ಸರಿಯಲ್ಲ. ಕೆಎ-32-ಇಪಿ-2953 ರ ಸ್ಕೂಟ್ ಈ ಪ್ರಕರಣಕ್ಕೆ ಸಂಬಂಧಿಸಿದ್ದಲ್ಲ ಎಂದರೆ ಸರಿ ಆದರೆ ಠಾಣೆ ಮೊಕದ್ದಮೆ ಸಂಖ್ಯೆ 284/2018 ಪ್ರಕರಣಕ್ಕೆ ಸಂಬಂಧಿಸಿದ್ದಾಗಿದೆ. 1, 3 ಮತ್ತು 4 ನೇ ಆರೋಪಿತರಿಂದ ಅಮಾನತ್ತು ಪಡಿಸಿಕೊಳ್ಳಲಾಗಿದೆ ಎನ್ನುವ ತಲಾ ರೂ.2000/-, 1700/-, 1160 ಈ ಪ್ರಕರಣಕ್ಕೆ ಸಂಬಂಧಿಸಿದ್ದಲ್ಲ ಎಂದರೆ ಸರಿ ಬೇರೆ ಪ್ರಕರಣದಲ್ಲಿ ಭಾಗಿಯಾಗಿದ್ದರು. ಚಾಸಾ 6 ಮತ್ತು 7 ರವರಿಗೆ ಪಿರಿಯಾಪಟ್ಟಣದ ಜ್ಯುವೆಲರಿ ಅಂಗಡಿಯಲ್ಲಿ ಮಹಜರಿಗೆ ಬರುವಂತೆ ನೋಟೀಸ್ ಕೊಟ್ಟಿಲ್ಲ ಆದರೆ ವಿಷಯ ತಿಳಿಸಿ ಬರಮಾಡಿಕೆಂಡಿದ್ದೇನೆ. ಅಮಾನತ್ತು ಮಹಜರ್ ಮಾಡುವ ಕಾಲಕ್ಕೆ ಮೇಲೆ ಹೇಳಿದ ಒಡವೆಗಳ ಬಗ್ಗೆ ಭಾವಚಿತ್ರ ತೆಗೆಸಿದ್ದೇನೆ. ಅದನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿಲ್ಲ. ಅಮಾನತ್ತು ಪಡಿಸಿಕೊಂಡ ಒಡವೆಗಳು ಯಾರಿಗೆ ಸೇರಿದ್ದು ಎಂದು ತನಿಖೆ ಮಾಡಿದ್ದೀರಾ ಎಂದರೆ ಈ ಪ್ರಕರಣದಲ್ಲಿ ಕಳುವಾದ ಮಾಲುಗಳಾಗಿವೆ. ಆ ದಿನ ಯಾವುದೇ ಮಹಜರ್ ನ್ನು ಜರುಗಿಸಿಲ್ಲ ಎಂದರೆ ಸರಿಯಲ್ಲ. ನಿಪಿ 4 ರ ಮಹಜರ್ ನ್ನು ಸ್ಥಳದಲ್ಲಿ ಮಾಡಿಲ್ಲ ಮತ್ತು ಈ ಕೇಸಿಗಾಗಿ ಸೃಷ್ಠಿಮಾಡಿಕೆಂಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಮಹಜರಿಗೆ 1 ಮತ್ತು 3 ನೇ ಆರೋಪಿತರ ಸಹಿಗಳನ್ನು ಪಡೆದುಕೊಂಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ 02.06.2018 ರಂದು ಚಾಸಾ 1 ರವರನ್ನು ಠಾಣೆಗೆ ಬರಮಾಡಿಕೊಂಡು ಅವರಿಗೆ ಒಡವೆಗಳನ್ನು ತೋರಿಸಿದ ಬಗ್ಗೆ ಭಾವಚಿತ್ರವನ್ನು ತೆಗೆಸಿದ್ದೇನೆ. ಸದರಿ ಭಾವಚಿತ್ರ ಮತ್ತು ಸಿಡಿಯನ್ನು ಹಾಜರುಪಡಿಸಿಲ್ಲ. ನಾನು ಚಾಸಾ 1 ರವರನ್ನು ಠಾಣೆಗೆ ಕರೆಸಿಲ್ಲ ಎಂದರೆ ಸರಿಯಲ್ಲ. ನಾನು ಅವರಿಂದ ಯಾವುದೇ ಮುಂದುವರೆದ ಹೇಳಿಕೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತರಿಂದ ಸ್ವ ಇಚ್ಛಾ ಹೇಳಿಕೆಗಳನ್ನು ನನಗೆ ಉಪಯೋಗವಾಗುವ ರೀತಿಯಲ್ಲಿ ಬರೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನಿಪಿ 5 ರಿಂದ 7 ರಂತೆ ಸ್ವ ಇಚ್ಛಾ ಹೇಳಿಕೆಗಳನ್ನು ನನ್ನ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತರ ಪೈಕಿ ಯಾರ್ಯಾರು ಎಷ್ಟನೇ ಆರೋಪಿತರು ಎಂದು ಹೇಳಲಾಗುವುದಿಲ್ಲ ಎಂದರೆ ಹೇಳಬಲ್ಲೆ. ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರೂ ಸಹ ನಾನು ಸುಳ್ಳು ತನಿಖೆಯನ್ನು ಮಾಡಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ 3 ನೇ ಆರೋಪಿ ಪರ ಶ್ರೀಮತಿ ಜೆ ಪಿ ವಕೀಲರ ಪರ ಶ್ರೀ ಎಸ್ ಎನ್ ವಕೀಲರಿಂದ ಹಾಗೂ 4 ನೇ ಆರೋಪಿ ಪರ ಶ್ರೀ ಎಸ್ ಎನ್ ಕೆ ಪರ ಶ್ರೀ ಜಿ ಎನ್ ಕೆ ವಕೀಲರಿಂದಃ</u>**

ಮೇಲಿನ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ನುಡಿಯುತ್ತಾರೆ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ. ಹುಣಸೂರು.